ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:893/2024
ಸಿ.ಡಬ್ಲ್ಯು 4 ಪಿ.ಡಬ್ಯೂ : 3

| | |
|---|---|
| ಸಾಕ್ಷಿದಾರರ ಹೆಸರು | ದಿವಾಕರ ಜೆ ಸುವರ್ಣ |
| ತಂದೆಯ ಹೆಸರು | ಜಗನ್ನಾಥ್ ಆರ್ ಸಾಲಿಯಾನ್ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಎ. ಎಸ್ ಐ |
| ವಾಸಸ್ಥಳ | ಮುಲ್ಕಿ |

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

2017 ನವೆಂಬರ್ ತಿಂಗಳಿನಿಂದ 2023ರ ನವೆಂಬರ್ ತಿಂಗಳಿನವರೆಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಎ. ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ. ದಿಃ 20-09-2022 ರಂದು ನಾನು ಠಾಣೆಯಲ್ಲಿ ಇರುವಾಗ ಚಾಸಾ 3ರವರು ಕರೆ ಮಾಡಿ ಪಡುಬಿದಿರ ಪೇಟೆಗೆ ಬರುವಂತೆ ತಿಳಿಸಿದರು. ನಾನು ಪಡುಬಿದಿರ ಪೇಟೆಗೆ ಹೋದೆನು. ಚಾಸಾ 3ರವರು ಅವರ ವಾಹನದಲ್ಲಿ ಕಣ್ಣಂಗಾರಿಗೆ ಕರೆದುಕೊಂಡು ಹೋದರು. ಚಾಸಾ 1ರವರು ಸುಮಾರು 6.20ರ ಸಮಯಕ್ಕೆ ಅಲ್ಲಿಗೆ ಬಂದರು. ದೊರೆತ ಮಾಹಿತಿಯನ್ನು ಆಧರಿಸಿ ಚಾಸಾ1ರವರೊಂದಿಗೆ ಕಣ್ಣಂಗಾರು ಬೈಪಾಸಿನಲ್ಲಿ ಇರುವ ಕಾಂಪ್ಲೆಕ್ಸ್ ನ ಒಳಗೆ ಹೋಗಿ ನೋಡಿದಾಗ ಒಂದು ಮನೆಯ ವರಾಂಡದಲ್ಲಿ ಬೆಳ್ತಿಗೆ ಮತ್ತು ಕುಚ್ಚಿಗೆ ತುಂಬಿರುವ ಚೀಲಗಳ ದಾಸ್ತಾನು ಇತ್ತು. ಅದರ ಪಕ್ಕದಲ್ಲಿ ದಾಸ್ತಾನು ಕೊಠಡಿ ಇದ್ದು ಅದರಲ್ಲಿಯೂ ಬೆಳ್ತಿಗೆ ಮತ್ತು ಕುಚ್ಚಿಗೆ ಅಕ್ಕಿ ಇರುವ ಚೀಲಗಳು ಇರುವುದು ಕಂಡು ಬಂತು.

ಕೆಲಸಗಾರರಾದ ಚಾಸಾ 5 ಮತ್ತು 6ರವರು ತೂಕದ ಯಂತ್ರದ ಮೂಲಕ ಅಕ್ಕಿಯನ್ನು ತೂಕ ಮಾಡಿ ಚೀಲಕ್ಕೆ ತುಂಬುವ ಕೆಲಸ ಮಾಡುತ್ತಿದ್ದರು.

ಚಾಸಾ 1ರವರು ಅಕ್ಕಿಯನ್ನು ಪರಿಶೀಲಿಸಿದರು. ಅಕ್ಕಿಯು ಸರ್ಕಾರವು ಅನ್ನಭಾಗ್ಯ ಯೋಜನೆ ಅಡಿಯಲ್ಲಿ ವಿತರಿಸುವ ಅಕ್ಕಿಗೆ ಸಾಮ್ಯತೆ ಇರುವುದನ್ನು ದೃಡಪಡಿಸಿದರು. ಮನೆಯಲ್ಲಿ ಇದ್ದ ಆಯಿಶಾ ಮತ್ತು ಹಸಿನಾ ರವರು ಮನೆಯು ಮಹಮ್ಮದ್ ಶಫೀಕ್ ರವರಿಗೆ ಸೇರಿದ್ದು ಎಂದು ತಿಳಿಸಿದರು.

ಮಹಮ್ಮದ್ ಶಫೀಕ್ ರವರ ಮನೆಯ ಎದುರು ಇದ್ದ ದಾಸ್ತಾನು ಕೋಣೆಯಲ್ಲಿ 50 ಕೆಜಿ ಸಾಮರ್ಥ್ಯದ ಅನ್ನ ಭಾಗ್ಯ ಯೋಜನೆ ಅಡಿ ಸರಬರಾಜು ಆಗುವ ಚಿಹ್ನೆ ಇರುವ 33 ಗೋಣಿ ಚೀಲಗಳು ಇದ್ದವು. ಅವುಗಳಲ್ಲಿ 50 ಕೆಜಿ ಬೆಳ್ತಿಗೆ ಅಕ್ಕಿ ತುಂಬಿಸಿ ಹೊಲಿದು ಇಟ್ಟಿರುವ 4 ಗೋಣಿ ಚೀಲಗಳು, ತಲಾ 50 ಕೆಜಿ ಕುಚ್ಚಿಗೆ ಅಕ್ಕಿ ತುಂಬಿರುವ ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ 192 ಪಾಲಿಥಿನ್ ಚೀಲಗಳು, ತಲಾ 20 ಕೆಜಿ ತೂಕದ ಕುಚ್ಚಲಕ್ಕಿ ತುಂಬಿರುವ 31 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 28 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 2 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 10 ಪಾಲಿಥಿನ್ ಚೀಲಗಳು ಇದ್ದವು.

ಪಂಚರ ಸಮಕ್ಷಮದಲ್ಲಿ ನೋವಾ ಕಂಪನಿಯ ಡಿಜಿಟಲ್ ತೂಕದ ಯಂತ್ರದ ಮೂಲಕ ತೂಕ ಮಾಡಿ ಪಂಚನಾಮೆಯನ್ನು ಜರುಗಿಸಿ ವಶಕ್ಕೆ ಪಡೆದುಕೊಂಡರು. ನೋವಾ ಕಂಪನಿಯ ಡಿಜಿಟಲ್ ತೂಕದ ಯಂತ್ರ, ಹಾಗೂ ರೇವು ಕಂಪನಿಯ ಹೊಲಿಗೆ ಯಂತ್ರವನ್ನು ಕೂಡ ಜಪ್ತು ಮಾಡಿಕೊಂಡರು. ಸ್ಥಳ ದಲ್ಲಿ ಪಂಚನಾಮೆಗೆ ಸಹಿ ಮಾಡಿದೆನು. ಸಾಕ್ಷಿಯವರು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು

ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 2 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಯವರು ಮೂರು ಭಾವಚಿತ್ರಗಳನ್ನು ನೋಡಿ ನಾವು ಆ ದಿನ ಹೋದಾಗ ಇದ್ದ ಸ್ವತ್ತುಗಳು ಇದೇ ಎಂದು ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ. 7 ಎಂದು ಗುರುತಿಸಲಾಗಿದೆ. ಸಾಕ್ಷಿಯವರು ಹೊಲಿಗೆ ಯಂತ್ರ ಹಾಗೂ ತೂಕದ ಯಂತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮೂ.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಈ ಬಗ್ಗೆ ದಿಃ 21-09-2022 ರಂದು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯವರು ಯಾರು ಎಂದು ನಂತರದಲ್ಲಿ ತಿಳಿದುಕೊಂಡೆನು. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯವರ ಆ ವ್ಯಕ್ತಿಯಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯವರ ಪರವಾಗಿ ಶ್ರೀ ಹೆಚ್ ಹೆಚ್ ಕೆ ವಕೀಲರಿಂದಃ**

ದಿಃ 20-09-2022 ರಂದು ನೀವು ಯಾವ ಕೆಲಸಕ್ಕೆ ನಿಯೋಜನೆ ಗೊಂಡಿರುತ್ತೀರಿ ಎಂದರೆ ತನಿಖಾಧಿಕಾರಿಯವರ ಸಹಾಯಿಕರಾಗಿ ನಿಯೋಜನೆ ಗೊಂಡಿರುತ್ತೇನೆ. ಈ ಬಗ್ಗೆ ಕರ್ತವ್ಯ ನಿಯೋಜಾ ಪುಸ್ತಕದಲ್ಲಿ ದಾಖಲಾಗಿದೆ ಎಂದರೆ ಹೌದು. ನೀವು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ತನಿಖಾಧಿಕಾರಿಯವರ ಸಹಾಯಕರಾಗಿ ಕೆಲಸ ಮಾಡಿರುತ್ತೀರಿ ಎಂದರೆ ಬೆಳಿಗ್ಗೆ ಯಿಂದ ರಾತ್ರಿಯವರೆಗೆ ತನಿಖಾಧಿಕಾರಿಯವರ ಸಹಾಯಕರಾಗಿ ಕೆಲಸ ಮಾಡಿರುತ್ತೇನೆ. ಆ ದಿನದಂದು ನಿಮ್ಮ ಠಾಣೆಯಲ್ಲಿ ನಿಮ್ಮ ಮೇಲಾಧಿಕಾರಿಯವರು ಯಾರು ಆಗಿದ್ದರು ಎಂದರೆ ಚಾಸಾ 3 ರವರು ಮತ್ತು ಪುರುಷೋತ್ತಮರವರು ಆಗಿದ್ದರು. ನೀವು ಠಾಣೆಯಿಂದ ಬಿಡುವ ಕಾಲದಲ್ಲಿ

ಚಾಸಾ 3 ರವರು ಠಾಣೆಯಲ್ಲಿ ಇದ್ದರೇ ಎಂದರೆ ಅವರು ಗಸ್ತಿಗೆ ಹೋಗಿದ್ದರು. ನೀವು ಠಾಣೆಯನ್ನು ಬಿಡಬೇಕಾಗಿದ್ದಲ್ಲಿ ಠಾಣಾಧಿಕಾರಿಯಿಂದ ಅನುಮತಿ ಪಡೆಯಬೇಕು ಹಾಗೂ ನಿಮ್ಮ ಕೆಲಸವನ್ನು ಹಸ್ತಾಂತರಿಸಬೇಕು ಎಂದರೆ ಠಾಣಾಧಿಕಾರಿಯವರ ಸಹಾಯಕನಾಗಿ ಹೋಗಿರುವುದರಿಂದ ಕೆಲಸವನ್ನು ಹಸ್ತಾಂತರಿಸಿರುವುದಿಲ್ಲ.

ನೀವು ಹೋಗಿದ್ದೆನೆಂದು ಹೇಳುವ ಸ್ಥಳವು ಪಡುಬಿದ್ರಿಯಿಂದ ಎಷ್ಟು ದುಾರದಲ್ಲಿ ಇದೆ ಎಂದರೆ ಸುಮಾರು 3.50 ರಿಂದ 4.00 ಕಿ.ಮೀ ದೂರಿದಲ್ಲಿ ಇದೆ. ನೀವು ಇಲಾಖಾ ವಾಹನದಲ್ಲಿ ಹೋಗಿರುವುದೇ ಎಂದರೆ ಖಾಸಗಿ ವಾಹನದಲ್ಲಿ ಹೋಗಿದ್ದೆನು. ಚಾಸಾ 2 ರವರು ಯಾವ ವಾಹನದಲ್ಲಿ ಬಂದಿದ್ದರು ಎಂದರೆ ಇಲಾಖಾ ವಾಹನದಲ್ಲಿ ಬಂದಿದ್ದರು. ಚಾಸಾ 1 ರವರು ಯಾವ ವಾಹನದಲ್ಲಿ ಬಂದಿದ್ದರು ಎಂದರೆ ವಾಹನದಲ್ಲಿ ಬಂದಿದ್ದರು ಯಾವ ವಾಹನ ಎಂದು ನೆನಪಿಲ್ಲ.

ನೀವು ಹೋಗಿದ್ದ ಸ್ಥಳವು ರಾಷ್ಟ್ರೀಯ ಹೆದ್ದಾರಿಯಲ್ಲಿ ಇದೆಯೇ ಎಂದರೆ ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮ ಬದಿಯಲ್ಲಿರುವ ಬೈಪಾಸಿನಲ್ಲಿರುತ್ತದೆ. ಬೈಪಾಸಿನಿಂದ ನೀವು ಹೋಗಿದ್ದೆನೆಂದು ಹೇಳುವ ಸ್ಥಳ ವು 50 ಮೀ ಒಳಗೆ ಇದೆ. ನೀವು ಹೋಗಿದ್ದ ಸ್ಥಳ ದ ಚೆಕ್ ಬಂದಿಯನ್ನು ನಿಖರವಾಗಿ ಹೇಳಲು ಆಗುತ್ತದೆಯೇ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ.

ನೀವು ಸಹಿ ಮಾಡಿರುತ್ತೇನೆಂದು ಹೇಳುವ ಪಂಚನಾಮೆಯನ್ನು ಓದಿ ನೋಡಿ ಸಹಿ ಮಾಡಿರುವುದೇ ಎಂದರೆ ಹೌದು. ನೀವು ಸಹಿ ಮಾಡಿದ್ದೇನೆಂದು ಹೇಳುವ ಪಂಚನಾಮೆಯ ಯಾವ ಸಾಲುಗಳಲ್ಲಿ ತಿದ್ದುಪಡಿಯಾಗಿದೆ ಎಂದು

ಗಮನಿಸಿರುತ್ತೀರಾ ಎಂದರೆ ಹೌದು. ಯಾವ ಸಾಲುಗಳಲ್ಲಿ ಯಾವ ತಿದ್ದುಪಡಿಯನ್ನು ಮಾಡಲಾಗಿದೆ ಎಂದು ಹೇಳಬಹುದೇ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. ಪಂಚನಾಮೆಯಲ್ಲಿ ತಿದ್ದುಪಡಿಯನ್ನು ಯಾರು ಮಾಡಿರುತ್ತಾರೆ ಎಂದರೆ ಚಾಸಾ 1ರವರು ಮಾಡಿರುತ್ತಾರೆ. ಪಂಚನಾಮೆಯನ್ನು ಯಾರು ಬರೆದರು ಎಂದರೆ ಚಾಸಾ 1ರವರು ಬರೆದರು. ಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬರೆದಿರುತ್ತಾರೆ ಎಂದರೆ ಸಂಜೆ 6.30 ರಿಂದ 10.15ರವರೆಗೆ ಬರೆದಿರುತ್ತಾರೆ. ಪಂಚನಾಮೆಯನ್ನು ಬರೆಯಲು ಪ್ರಾರಂಭಿಸಿದ ಸಮಯವನ್ನು ನಮೂದು ಮಾಡಲಾಗಿದೆಯೇ ಎಂದರೆ ಇಲ್ಲ.

ಪಂಚನಾಮೆಗೆ ನಿಮ್ಮ ಹೊರತು ಪಡಿಸಿ ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದರೆ 9 ಜನ ಸಹಿ ಮಾಡಿರುತ್ತಾರೆ. ಸಾಕ್ಷಿದಾರರು ಯಾವ ಊರಿನವರು ಎಂದರೆ ನಡ್ಸಾಲು ಮತ್ತು ಹೆಜಮಾಡಿ ಗ್ರಾಮದವರು. ಸಾಕ್ಷಿದಾರರನ್ನು ಯಾರು ಕರೆಸಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಘಟನಾ ಸ್ಥಳದಿಂದ ಎಷ್ಟು ಕಿ.ಮೀ ದೂರದಲ್ಲಿ ವಾಸವಾಗಿರುತ್ತಾರೆ ಎಂದು ನಿಮಗೆ ಗೊತ್ತಿದೆಯೇ ಎಂದರೆ ಇಲ್ಲ.

ಪಂಚನಾಮೆಯನ್ನು ತಯಾರಿಸುವಾಗ ನೀವು ಸ್ಥಳದಲ್ಲಿ ಇರುತ್ತೀರ ಎಂದರೆ ಪಂಚನಾಮೆಯನ್ನು ತಯಾರಿಸಲು ಸಹಾಯ ಮಾಡಿರುತ್ತೇನೆ. ಪಂಚನಾಮೆಯನ್ನು ತಯಾರಿಸುವಾಗ ಪೋಟೋಗಳನ್ನು ತೆಗೆದಿರುತ್ತಾರೆಯೇ ಎಂದರೆ ಹೌದು. ನಿಪಿ 7ನ್ನು ಸಾಕ್ಷಿಯವರಿಗೆ ತೋರಿಸಿ ಇದರಲ್ಲಿ ಅಧಿಕಾರಿಗಳು, ಪಂಚರು ಕಾಣುತ್ತಾರೆಯೇ ಎಂದರೆ ಇಲ್ಲ. ನಿಪಿ 7ರಲ್ಲಿ ಮನೆಯು ಯಾರಿಗೆ ಸೇರಿದ್ದು, ಮನೆ ಇರುವ ಬಗ್ಗೆ ಕಾಣುವುದಿಲ್ಲ ಎಂದರೆ ಇಲ್ಲ. ನಿಪಿ 7ರಲ್ಲಿ ಪಂಚರ ಹಾಗೂ ತನಿಖಾಧಿಕಾರಿಯವರ ಸಹಿ ಇರುವ ಚೀಟಿ ಅಂಟಿಸಿರುವುದು ಹಾಗೂ

ಸೀಲು ಹಾಕಿರುವುದು ಕಂಡು ಬರುವುದಿಲ್ಲ ಎಂದರೆ ಹೌದು. ನಿಪಿ 7ಕ್ಕೂ ಹಾಗೂ ನಿಪಿ 2ಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನೀವು ಸ್ಥಳ ಕ್ಕೆ ಹೋಗದೇ ಇರುವುದರಿಂದ ನಿಪಿ 2ನ್ನು ಸ್ಥಳ ದಲ್ಲಿ ತಯಾರಿಸದೇ ಇರುವುದರಿಂದ ನೀವು ಮತ್ತು ನಿಮ್ಮ ಮೇಲಾಧಿಕಾರಿಯವರು, ಪಂಚನಾಮೆಗೆ ಸಹಕರಿಸಿದ್ದಾರೆಂದು ಹೇಳುವ ವ್ಯಕ್ತಿಗಳು ಕಾಣಸುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 2ನ್ನು ಠಾಣೆಯಲ್ಲಿ ತಯಾರಿಸಿದ್ದು ನೀವು ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಯಾವುದು ರೇಷನ್ ಅಕ್ಕಿ, ಯಾವುದು ಹೊರಗಡೆ ಸಿಗುವ ಅಕ್ಕಿ ಎಂದು ನಿಮಗೆ ಅನುಭವ ಇಲ್ಲ ಎಂದರೆ ಸರಿಯಲ್ಲ. ಘಟನೆಯಲ್ಲಿ ಜಪ್ತು ಮಾಡಿಕೊಂಡರೆಂದು ಹೇಳುವ ಅಕ್ಕಿಯನ್ನು ಪರಿಶೀಲನೆ ಮಾಡಲು ಮಾದರಿ ಅಕ್ಕಿಯನ್ನು ನೀವು ತೆಗೆದುಕೊಂಡು ಹೋಗಿರುತ್ತೀರಾ ಎಂದರೆ ಇಲ್ಲ.

ಚಾಸಾ 1 ಅಥವಾ 2ರವರು ಮಾದರಿ ಅಕ್ಕಿಯನ್ನು ತಂದು ಘಟನಾ ಸ್ಥಳದಲ್ಲಿ ಇದ್ದ ಅಕ್ಕಿಯೊಂದಿಗೆ ತುಲನೆ ಮಾಡಿ ತೋರಿಸಿರುತ್ತಾರೆಯೇ ಎಂದರೆ ಇಲ್ಲ. ಅಕ್ಕಿಯ ಮಾದರಿಯನ್ನು ಪರೀಕ್ಷೆಗಾಗಿ ತೆಗೆದುಕೊಂಡಿರುತ್ತಾರೆಯೇ ಎಂದರೆ ಇಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನೀವು ಘಟನಾ ಸ್ಥಳಕ್ಕೆ ಹೋಗಿರುತ್ತೇನೆಂದು ಹೇಳುವುದು, ಪಂಚನಾಮೆಯನ್ನು ತಯಾರಿಸಿರುತ್ತೇನೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯವರಿಗೂ ಈ ಪ್ರಕರಣಕ್ಕೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

ಚಾಸಾ 2ರವರು ನಿಮ್ಮ ಮೇಲಾಧಿಕಾರಿಯಾಗಿರುವುದರಿಂದ ಅವರು ದಾಖಲಿಸಿದ ಕೇಸಿಗೆ ಸಹಾಯ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.